ವಿಷಯ :- ಸೂರತ್ಕಲ್ ಕ್ಷೇತ್ರದ ಕಾಟಿಪಳ್ಳದ ಸರ್ಕಾರಿ ಆಸ್ಪತ್ರೆಗೆ ಹಾಸಿಗೆಗಳು ಮತ್ತು ನೀರು ಪೂರೈಕೆ ಮಾಡುವುದು.

ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ 268 (935)

ಶ್ರೀ ಕುಂಭ್ಳಿ ಸುಂದರರಾವ್ (ಸೂರತ್ಕಲ್) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೂರತ್ಕಲ್ ಕ್ಷೇತ್ರದ ಕಾಟಿಪಳ್ಳದ ಸರ್ಕಾರಿ ಆಸ್ಪತ್ರೆಗೆ ಬೆಡ್‌ಗಳ ವ್ಯವಸ್ಥೆ ಹಾಗೂ ನೀರಿನ ವ್ಯವಸ್ಥೆ ಮಾಡಲಾಗಿದೆಯೇ?

ಆ) ಇಲ್ಲದಿದ್ದಲ್ಲಿ ಆ ವ್ಯವಸ್ಥೆಯನ್ನು ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಡಾ : ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಬೆಡ್‌ನ ವ್ಯವಸ್ಥೆ ಇರುವುದಿಲ್ಲ.

ಸಧ್ಯಕ್ಕೆ ಪಂಚಾಯತ್ ವತಿಯಿಂದ ನಲ್ಲಿ ನೀರನ್ನು ಒದಗಿಸಲಾಗುತ್ತಿದೆ.

ಆ) ಬೆಡ್‌ನ ವ್ಯವಸ್ಥೆಯನ್ನು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಅನುಮೋದನೆಯೊಂದಿಗೆ ಪೂರ್ಣ ಪ್ರಮಾಣದ ನೀರನ್ನು ಒದಗಿಸಲು ವ್ಯವಸ್ಥೆ ಮಾಡಲಾಗುವುದು.

ಶ್ರೀ ಕುಂಭ್ಳಿ ಸುಂದರರಾವ್ :- ಸೂರತ್ಕಲ್ ಕ್ಷೇತ್ರದ ಕಾಟಿಪಳ್ಳದ ಸರ್ಕಾರಿ ಆಸ್ಪತ್ರೆಗೆ ಬೆಡ್‌ಗಳ ವ್ಯವಸ್ಥೆ ಹಾಗೂ ನೀರಿನ ವ್ಯವಸ್ಥೆ ಮಾಡಲಾಗಿದೆಯೇ? ಎಂದು ಕೇಳಿದಕ್ಕೆ ಬೆಡ್‌ನ ವ್ಯವಸ್ಥೆ ಇರುವುದಿಲ್ಲ, ಸಧ್ಯಕ್ಕೆ ಪಂಚಾಯತ್ ವತಿಯಿಂದ ನಲ್ಲಿ ನೀರನ್ನು ಒದಗಿಸಲಾಗುತ್ತಿದೆ. ಎಂದು ಉತ್ತರಿಸಿದ್ದಾರೆ. ಬೆಡ್‌ನ ವ್ಯವಸ್ಥೆ ಇಲ್ಲದ ಆಸ್ಪತ್ರೆ ಎಂದಮೇಲೆ ಯೋಚಿಸಬೇಕಾದ ಪರಿಸ್ಥಿತಿ ಇದೆ. ಈ ಆಸ್ಪತ್ರೆ ಯಾವಾಗ ಪ್ರಾರಂಭವಾಯಿತು? ಬಿಡ್ಡಿಗೆ ಸ್ಥಳಾವಕಾಶವನ್ನು ಮಾಡಿ ಬೆಡ್ ಒದಗಿಸದೇ ಇರುವುದಕ್ಕೆ ಕಾರಣವೇನು? ಪಂಚಾಯತ್ ಹೊರಗಡೆ ಇರುವಂಥ ನಲ್ಲಿಯಿಂದ ಆಸ್ಪತ್ರೆಯ ಕೆಲಸ ನಡೆಯುತ್ತದೆಂದು ನೀವು ಏತಕ್ಕೆ ಊಹಿಸುತ್ತೀರಿ? ಟ್ಯಾಂಕ್ ಕಟ್ಟಿ ಆಸ್ಪತ್ರೆಗೆ ನೀರು ಕೊಟ್ಟಾಗ ಅದು ಪರಿಪೂರ್ಣ ಆಸ್ಪತ್ರೆಯಾಗುತ್ತದೆ. ಫುಡ್ ಇಲ್ಲ ಎಂದ ಮೇಲೆ ಆಸ್ಪತ್ರೆ ಗುಡ್ ಇಲ್ಲ ಎಂದು ಹೇಳಿದಹಾಗೆ ಆಯಿತು. ನೀವು ಗುಡ್ ಇದ್ದೀರಿ, ಆಸ್ಪತ್ರೆ ಗುಡ್ ಮಾಡುವುದಕ್ಕೆ ಏನು ಮಾಡುತ್ತೀರಿ? ಅದನ್ನು ಹೇಳಿ?

ಅಧ್ಯಕ್ಷರು :- ಸುಂದರ್‌ರಾಯರು ಹೇಗೆ ಎಂದರೆ ಅವರಿಗೆ ಬ್ರೆಡ್ ಇಲ್ಲದೇ ಇದ್ದರೂ ಪರವಾಗಿಲ್ಲ ಬೆಡ್ ಚೆನ್ನಾಗಿ ಇರಬೇಕು.

ಡಾ : ಹೆಚ್. ಸಿ. ಮಹದೇವಪ್ಪ :- ಸನ್ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಆರೋಗ್ಯ ಕೇಂದ್ರ ಇಂಡಸ್ಟ್ರೀಯಲ್ ರೀ-ಹ್ಯಾಬಿಲಿಟೇಶನ್ ಏರಿಯಾದಲ್ಲಿ ಇದೆ ನಾವು ಇನ್ ಫೇಶಂಟ್ಸ್ ಇದ್ದಲ್ಲಿ ಹಾಸಿಗೆಗಳನ್ನು ಒದಗಿಸಿಲ್ಲ. ಆದರೆ ನಾನು ಈ ಸಾರಿ ಸ್ವಲ್ಪ ಹಾಸಿಗೆಗಳನ್ನು ಕೊಡಲಿಕ್ಕೆ ಕ್ರಮ ಕೈಗೊಳ್ಳುತ್ತೇನೆ. ಆದರೆ ಪಂಚಾಯತ್‌ನವರು ನಲ್ಲಿ ಹಾಕಿಸಿ ಕ್ರಮ ಕೈಗೊಂಡು ನೀರನ್ನು ಕೊಟ್ಟಿದ್ದಾರೆ. ಜಿಲ್ಲಾ ಪರಿಷತ್‌ನಲ್ಲಿ ನಾನು ಕೂಡ ನಿಮ್ಮ ಪರವಾಗಿ ಕೇಳಿ ಅಲ್ಲಿ ಬೋರ್‌ವೆಲ್ ಹಾಕಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕುಂಬೆ ಸುಂದರ್‌ರಾವ್ :- ಆಲ್ಲಿ ರೋಗಿಗಳು ಬಂದರೆ ಎಲ್ಲಿ ಮಲಗಬೇಕು? ಆಲ್ಲಿ ಡಾಕ್ಟರ್ ಇಲ್ಲ, ವಾರಕ್ಕೆ ಎರಡು ಸಾರಿ ಡಾಕ್ಟರ್ ಬರುತ್ತಾರೆ. ಅದು ನಿರ್ವಸತಿ ಪ್ರದೇಶ. ಪಣಂಬೂರಿನ ಹಾರ್ಬರ್‌ಗೆ ಜಾಗಬಿಟ್ಟು ಕೊಟ್ಟು ಅವರಿಗೆ ಒಂದು...

ಅಧ್ಯಕ್ಷರು :- ನಮಗೆಲ್ಲಾ ಗೊತ್ತುಂಟು ಮಹಾರಾಯರೇ, ಅವರು ಬಿಡ್ಡಿಗೆ ಸೂಕ್ತ ವ್ಯವಸ್ಥೆಮಾಡಲಿದ್ದಾರೆ. ತಮಗೆ ಆತಂಕ ಬೇಡ.

ವಿಷಯ :- 1996-97 ನೇ ಸಾಲಿನಲ್ಲಿ ಪ್ರಾರಂಭವಾದ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 269 (858)

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ಎಷ್ಟು ಪ್ರೌಢಶಾಲೆಗಳನ್ನು ಮತ್ತು ಎಷ್ಟು ಪದವಿ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿದೆಯೇ?

ಆ) ಇದರಲ್ಲಿ ಇದುವರೆಗೂ ಎಷ್ಟ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆಯೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) 1996-97 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 200 ಸರ್ಕಾರಿ ಪ್ರೌಢಶಾಲೆ ಗಳನ್ನು ಮತ್ತು 50 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ.